# ಮಕ್ಕಳ ದೋಣಿ

ಬಣ್ಣದ ಕಾಗದ ತಾ ಮಡಿಚಿ
ದೋಣಿಯ ಮಾಡಿದ ತಿಪ್ಪೇಶಿ
ತಂಗಿಗು ಜೊತೆಯಲಿ ಬಾರೆಂದ
ಗೆಳೆಯರ ಗುಂಪನು ತಾ ಕರೆದ

ಕಾದರು ಮಕ್ಕಳು ಅಂಗಳದಿ
ಮೋಡವು ಮೂಡಿರೆ ಆಗಸದಿ
ಗುಡುಗಿನ ಹಿಂದೆಯೆ ಬಂತು ಮಳೆ
ಹರಿಯಿತು ರಭಸದಿ ನೀರ ಹೊಳೆ

ಮಕ್ಕಳ ಹರುಷಕೆ ಎಣೆಯಿಲ್ಲ
ಬಿಟ್ಟರು ಬಣ್ಣದ ದೋಣಿಗಳ
ಕುಳಿತರು ಮರುಕ್ಷಣ ಮಂಕಾಗಿ
ದೋಣಿಗಳೆಲ್ಲವು ಮುಳುಮುಳುಗಿ

ಗೆಳೆಯರ ನೋವನು ತಾ ಗ್ರಹಿಸಿ
ಉಪಾಯ ಮಾಡಿದ ತಿಪ್ಪೇಶಿ
ಆ ಕ್ಷಣ ಮನೆಯೊಳಗೋಡಿದನು
ತಂದನು ಅಜ್ಜನ ಛತ್ರಿಯನು

ಛತ್ರಿಯ ಮಾಡಿದ ತಲೆಕೆಳಗೆ
ಹಿಡಿದನು ನೀರನು ಅದರೊಳಗೆ
ಬನ್ನಿರಿ ಎಲ್ಲರೂ ದೋಣಿ ಬಿಡಿ
ಇದರಲಿ ಮುಳುಗದು ಚಿಂತೆ ಬಿಡಿ

ಬಿಟ್ಟರೆ ದೋಣಿಯ ಸಾಲಾಗಿ
ತೇಲುತ ಹೊರಟವು ಸ್ಥಿರವಾಗಿ
ನಂಬದೆಹೋದರು ಕಣ್ಣುಗಳ
ನೋಡುತ ನಲಿದರು ದೋಣಿಗಳ

ಮುಗಿಲನು ಮುಟ್ಟಲು ನಗು, ಕೇಕೆ
ಅಜ್ಜನೆ ಬಂದರು ನೋಡೋಕೆ
ಉಲಿದರು ಬೆನ್ನನು ತಟ್ಟುತಲಿ
ನೀವುಗಳೆಲ್ಲರೂ ಜಯಶಾಲಿ

ಖುಷಿಯಲಿ ನುಡಿಯಿತು ಮಿತ್ರಗಣ
ಬನ್ನಿರೊ ಇನ್ನೂ ಆಡೋಣ
ಇನ್ನೀ ಮಳೆಯಾ ಭಯವಿಲ್ಲ
ನಮ್ಮಯ ದೋಣಿಯು ಮುಳುಗೋಲ್ಲ

■ **ನಾಗೇಶ ಜೆ. ವೈದ್ಯ**
ಕಲೆ: ಸಂತೋಷ್ ಸಸಿಹಿತ್ಲು



## ಕುಂಚ ಪ್ರಪಂಚ



**ದೀಕ್ಷಾ**
8ನೇ ತರಗತಿ,
ಆಡೆನ್ ಪಬ್ಲಿಕ್ ಸ್ಕೂಲ್,
ಬೆಂಗಳೂರು





'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in

**ಧೃತಿ**
1ನೇ ತರಗತಿ,
ನವ್ಕಿಸ್ ಎಜುಕೇಶನಲ್ ಸೆಂಟರ್,
ಬೆಂಗಳೂರು

